ಓ ಎಸ್ 577/2014
ಪಿ ಡಬ್ಲ್ಯೂ-1 ಶ್ಯಾಮಲ ಪಿ

**ದಿನಾಂಕ 06.10.2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

ಮುಂದುವರಿದ ಪಾಟೀ ಸವಾಲು ಃ ಪ್ರತಿವಾದಿಯರ ಪರ ಜಿ ಎಮ್ ವಕೀಲರಿಂದ

3. ದಾವಾ ಆಸ್ತಿಯ ನಕ್ಷೆ ಮಹಜರು ಮತ್ತು ಹೇಳಿಕೆಗಳನ್ನು ಅಧಿಕಾರಿಗಳು ತಯಾರು ಮಾಡಿರುತ್ತಾರೆ . ಹೇಳಿಕೆ ಕೊಡುವಾಗ ನಾವೇ ಅನುಭವವನ್ನು ಕೊಟ್ಟಿರುತ್ತೇವೆ . ನಕ್ಷೆಯನ್ನು ತಯಾರು ಮಾಡುವಾಗ ಸರ್ವೇಯರ್ ಸ್ಥಳಕ್ಕೆ ಬಂದು ಅಳತೆ ಮಾಡಿರುತ್ತಾರೆ . ದಾವಾ ಆಸ್ತಿಯು ಮಂಜೂರಿಯಾದ ಬಗ್ಗೆ ಆದೇಶದ ದಾಖಲೆಯನ್ನು ಹಾಜರು ಮಾಡಿದ್ದೇನೆ . ಈಗ ಸಾಕ್ಷಿಗೆ ನಿಪಿ - 3 ನಕ್ಷೆಯನ್ನು ತೋರಿಸಲಾಗಿ ಅದು ನಮಗೆ ಮಂಜೂರಿಯಾದ ಜಮೀನಿನ ನಕ್ಷೆಯಾಗಿರುತ್ತದೆ . ನಿಪಿ -3 ನಕ್ಷೆಯಲ್ಲಿ ತೋರಿಸಿದ ವಿಚಾರಗಳು ನನ್ನ ಪ್ರಕಾರ ಸರಿ . ನಿಪಿ - 3 ನಕ್ಷೆಯಲ್ಲಿ ಸರ್ವೇ ನಂಬ್ರ 355-1 ಬಿ 2 ಕ್ಷೇತ್ರ 1 ಎಕರೆ 71 ಸೆಂಟ್ಸ್ ಪ್ರತಿವಾದಿಯರ ತಂದೆ ಮಮ್ಮೂನಿ ಬ್ಯಾರಿ ಇವರ ಹೆಸರಿನಲ್ಲಿ ಇದೆ ಎಂದರೆ ಸರಿ . ನಿಪಿ - 3 ನಕ್ಷೆಗೆ ನಮ್ಮ ತಕರಾರು ಇರುವುದಿಲ್ಲ . ನಿಪಿ - 3 ನಕ್ಷೆಯಲ್ಲಿ ತೋರಿಸಿದ ಸರ್ವೇ ನಂಬ್ರ 355-1 ಬಿ 2 ಕ್ಷೇತ್ರ 1 ಎಕರೆ 71 ಸೆಂಟ್ಸ್ ಜಮೀನು ಪ್ರತಿವಾದಿಯರ ತಂದೆ ಮಮ್ಮೂನಿ ಬ್ಯಾರಿ ಇವರಿಗೆ ಮಂಜೂರಿಯಾದ ಬಗ್ಗೆ ನಮ್ಮ ತಕರಾರು ಇರುವುದಿಲ್ಲ . ದಾವಾ ಜಮೀನಿಗೆ ನನ್ನ ಅಣ್ಣ ಅರ್ಜಿ ಕೊಡುವ ಸಮಯದಲ್ಲಿ ಬೇರೇ ಜಮೀನು ನಮ್ಮ ತಂದೆಯವರಿಗೆ ಇತ್ತು . ನಮ್ಮ ತಂದೆಯವರ ಹೆಸರಿನಲ್ಲಿದ್ದ ಜಮೀನು ಸರ್ವೇ ನಂಬ್ರ 357-1 ಎ ಕ್ಷೇತ್ರ 3 ಎಕರೆ 5 ಸೆಂಟ್ಸ್, 353/2 ಕ್ಷೇತ್ರ 1 ಎಕರೆ 20 ಸೆಂಟ್ಸ್ ಜಮೀನುಗಳು ಇದ್ದವು . ನನ್ನ ಅಣ್ಣ ದಾವಾ ಜಮೀನಿಗೆ ಮಂಜೂರಿ ಕೋರಿ ಅರ್ಜಿ ಸಲ್ಲಿಸುವಾಗ ನಮ್ಮ ತಂದೆಯ ಹೆಸರಿನಲ್ಲಿದ್ದ ಜಮೀನುಗಳ ಬಗ್ಗೆ ಮಾಹಿತಿಯನ್ನು ಅರ್ಜಿಯಲ್ಲಿ ಮಾಡಿದ್ದಾರಾ ಎನ್ನುವ ಬಗ್ಗೆ ನನಗೆ ಗೊತ್ತಿಲ್ಲ . ದಾವಾ ಜಮೀನಿನಲ್ಲಿ 30 ತೆಂಗಿನ ಮರಗಳು , ಆಕೆಶಿಯಾ , ಗೇರು ಮರಗಳು , ಇತರ ಕಾಡು ಜಾತಿಯ ಮರಗಳು, ಒಂದು ಬಾವಿ ಇರುತ್ತವೆ . ತೆಂಗಿನ ಮರಗಳನ್ನು ನನ್ನ ತಂದೆ ಮತ್ತು ಅಣ್ಣ ಕೆಲಸದವರೊಂದಿಗೆ ಸೇರಿಕೊಂಡು ನೆಟ್ಟಿರುತ್ತಾರೆ . ಈಗ ಅಂದಾಜು ಅವುಗಳಿಗೆ 35 ವರ್ಷಗಳಾಗಿರುತ್ತವೆ . ನಿಪಿ - 3 ದಾಖಲೆಯನ್ನು ಸಾಕ್ಷಿಗೆ ತೋರಿಸಲಾಗಿ ಅದರಲ್ಲಿ ನಾನು ಹೇಳಿದಂತೆ ತೆಂಗಿನ ಮರಗಳು ಸರ್ವೇ ನಂಬ್ರ

355-1 ಬಿ 1 , 354-2 ರಲ್ಲಿ ಬರುತ್ತವೆ . ನಿಪಿ - 25 ರಿಂದ ನಿಪಿ - 31 ದಾಖಲೆಗಳನ್ನು ಸಾಕ್ಷಿಗೆ ತೋರಿಸಲಾಗಿ ಅದರಲ್ಲಿ ತೆಂಗಿನ ಮರಗಳು ಕಾಣಿಸುವುದಿಲ್ಲ ಏಕೆಂದರೆ ಪೋಟೋಗಳಲ್ಲಿ ಸೊಪ್ಪು ಕಡೆಯಲ್ಲಿಕ್ಕೆ ಬಂದ ವ್ಯಕ್ತಿಯ ಭಾವ ಚಿತ್ರವನ್ನು ತೋರಿಸಲು ಬರುವಂತೆ ತೆಗೆದಿರುತ್ತದೆ . ಆದರೆ, ತೆಂಗಿನ ಮರಗಳ ಬಗ್ಗೆ ಭಾವ ಚಿತ್ರಗಳನ್ನು ತೆಗೆದಿರುವುದಿಲ್ಲ ಎನ್ನುತ್ತಾರೆ . ಸೊಪ್ಪು ಕಡಿಯುವ ಜಾಗದಲ್ಲಿ ತೆಂಗಿನ ಮರಗಳು ಇರಲಿಲ್ಲ .

4. ಈ ದಾವೆಯಲ್ಲಿ ಪ್ರತಿವಾದಿಗಳ ವಿರುದ್ಧ ಏನು ನಿರ್ದಿಷ್ಟ ಪರಿಹಾರ ಕೇಳಿದ್ದಿರಿ ಎಂದರೆ ಸಾಕ್ಷಿಯು ಕಟ್ಟಿದಂತಹ ಮನೆಯನ್ನು ಕೆಡವಿ ತೆರುವಗೊಳಿಸಬೇಕು ಮತ್ತು ಶಾಶ್ವತ ನಿರ್ಭಂದಕ ಆಜ್ಞೆ ಕೋರಿ ದಾವೆಯನ್ನು ಸಲ್ಲಿಸಿರುತ್ತೇನೆ . ಪ್ರತಿವಾದಿಯರು ಸಲ್ಲಿಸಿದ ಪ್ರತಿವಾದ ಪತ್ರದ ಬಗ್ಗೆ ತಿಳಿದುಕೊಂಡಿದ್ದೇನೆ . ಪ್ರತಿವಾದಿಯರು ಏನು ಸಾಧನೆ ಮಾಡುತ್ತಿದ್ದಾರೆ ಎಂದರೆ ಸಾಕ್ಷಿಯು ಅಳಿಕೆ ಗ್ರಾಮದ ಸರ್ವೇ ನಂಬ್ರ 355 – 1 ಬಿ 2 ಕ್ಷೇತ್ರ 1 ಎಕರೆ 71 ಸೆಂಟ್ಸ್ ಅದರಲ್ಲಿ ಭೂ ಪರಿವರ್ತನೆ ಮಾಡಿಕೊಂಡು ಮನೆ ಕಟ್ಟಲಿಕ್ಕೆ ಬರುತ್ತಿದ್ದಾರೆ . ಪ್ರತಿವಾದಿಗಳು ಮನೆಕಟ್ಟಲಿಕ್ಕೆ ಭೂ ಪರಿವರ್ತನೆ ಮಾಡಿಕೊಂಡ ಬಗ್ಗೆ ನನಗೆ 14-05-2014 ರಂದು ಪ್ರತಿವಾದಿಯರು ಜೆ ಸಿ ಬಿ ತೆಗೆದುಕೊಂಡು ಬಂದು ಕೆಲಸ ಮಾಡುತ್ತಿದ್ದರು ಆಗ ನಾನು ಆಕ್ಷೇಪಿಸಿದ್ದೇನು ನಂತರ ಪೋಲಿಸ ಠಾಣೆಗೆ 18-05-2014 ರಂದು ಅಣ್ಣನ ಹೆಸರಿನಲ್ಲಿ ದೂರನ್ನು ಸಲ್ಲಿಸಿದ್ದೇನು . ಆಗ ಪ್ರತಿವಾದಿಯರು ದಾಖಲೆಗಳನ್ನು ಹಾಜರುಪಡಿಸಿದ್ದರು ಆಗ ನನಗೆ ಗೊತ್ತಾಯಿತು . ಭೂ ಪರಿವರ್ತನಾ ಆದೇಶದ ಬಗ್ಗೆ ತಹಶೀಲ್ದಾರವರಿಗೆ ಮನವಿಯನ್ನು ಸಲ್ಲಿಸಿದ್ದೇನು . ಭೂ ಪರಿವರ್ತನಾ ಆದೇಶವನ್ನು ತಹಶೀಲ್ದಾರವರು ರದ್ದು ಮಾಡಿರುತ್ತಾರೆ . ಆ ಬಗ್ಗೆ ನಾನು ದಾಖಲೆಯನ್ನು ಹಾಜರುಪಡಿಸಿದ್ದೇನೆ . ನಿಪಿ - 3 ನಕ್ಷೆಯನ್ನು ಸಾಕ್ಷಿಗೆ ತೋರಿಸಲಾಗಿ ಅದರಲ್ಲಿ ಸರ್ವೆ ನಂಬ್ರ 355-1 ಬಿ 2 ರಲ್ಲಿ ಭೂ ಪರಿವರ್ತನೆಯನ್ನು ಕೇಳಿರುತ್ತಾರೆ . ಸರ್ವೆ ನಂಬ್ರ 355-1 ಬಿ 2 ಜಾಗೆಯು ಯಾರದು ಎಂದು ನಾನು ತಿಳಿದುಕೊಂಡಿದ್ದೇನೆ .

ಸ್ಥಿರ್ದಿ ಸರ್ವೆ ನಂಬ್ರ 355-1 ಬಿ 2 ಇದು ಪ್ರತಿವಾದಿಯರ ತಂದೆಯಾದ ಮಮ್ಮೂನಿ ಬ್ಯಾರಿ ಇವರದ್ದು ಎನ್ನುತ್ತಾರೆ . ನಮಗೆ ಮಂಜೂರಿಯಾದ ದಾವಾ ಜಮೀನನ್ನು ಹಿಸ್ಸಾ ಮಾಡುವಂತೆ ಕೋರಿ ಅಣ್ಣ ಕೊಟ್ಟಿದ್ದಾರೋ ಅಥವಾ ಇಲ್ಲವೋ ಎನ್ನುವ ಬಗ್ಗೆ ನನಗೆ ಗೊತ್ತಿಲ್ಲ . ಈ ವಿಚಾರವನ್ನು ನಮ್ಮ ಅಣ್ಣನ ಹತ್ತಿರ ಕೇಳಿರುತ್ತೇನೆ . ದಾವಾ ಜಮೀನು ಪ್ರತ್ಯೇಕ ಹಿಸ್ಸಾ ವಿಂಗಡನೆಯಾದ ಬಗ್ಗೆ ನಕ್ಷೆ ನಮ್ಮ ಹತ್ತಿರ ಇದೆಯಾ ಎಂದರೆ ಸಾಕ್ಷಿಯು ದರ್ಖಾಸ್ತು ನಕ್ಷೆ ಮಾತ್ರ ಇರುತ್ತದೆ ಎನ್ನುತ್ತಾರೆ .

5. ದಾವಾ ಜಮೀನಿನ ಉತ್ತರಕ್ಕೆ - ಮಮ್ಮೂನಿ ಬ್ಯಾರಿಯವರ ಜಮೀನು ಇರುತ್ತದೆ . ಪಶ್ಚಿಮ ದಿಕ್ಕಿಗೆ - ಜಯರಾಮ ನಾಯ್ಕ , ದಕ್ಷಿಣಕ್ಕೆ - ನಾರಾಯಣ ನಾಯ್ಕ , ಪೂರ್ವಕ್ಕೆ - ನಮ್ಮ ಉಳಿಕೆ ಜಮೀನು ಇರುತ್ತದೆ .

6. ಈ ಪ್ರಕರಣದಲ್ಲಿ ನ್ಯಾಯಾಲಯದ ಆಯುಕ್ತರನ್ನು ನೇಮಿಸಲಾಗಿದೆ . ನೋಟಿಸ್ ನೀಡಿ ದಾವಾ ಸ್ಥಳಕ್ಕೆ ಆಯುಕ್ತರು ಬಂದಿದ್ದರು . ಅದೇ ರೀತಿ ಅವರೊಂದಿಗೆ ಜಮೀನಿನ ಅಳತೆಗೆ ದಕ್ಷಿಣ ಕನ್ನಡ ಜಿಲ್ಲಾ ಭೂ ದಾಖಲೆಗಳ ತಾಂತ್ರಿಕ ನಿರ್ದೇಶಕರು ಬಂದಿದ್ದರು ಎಂದರೆ ಸರಿ . ಆ ಸಮಯದಲ್ಲಿ ನಾನು ಅವರಿಗೆ ದಾವಾ ಜಮೀನಿನ ಗಡಿ ಗುರುತುಗಳನ್ನು ತೋರಿಸಿದ್ದೇನೆ . ಪ್ರತಿವಾದಿಗಳು ನ್ಯಾಯಾಲಯಕ್ಕೆ ಏನೆಲ್ಲಾ ದಾಖಲೆಗಳನ್ನು ಹಾಜರುಪಡಿಸಿದ್ದಾರೆ ಎಂದರೆ ಸಾಕ್ಷಿಯು ಅವರು ಬಹಳ ದಾಖಲೆಗಳನ್ನು ಹಾಜರು ಮಾಡಿದ್ದಾರೆ ಆದ್ದರಿಂದ ನನಗೆ ಎಲ್ಲವನ್ನೂ ನೆನಪು ಇಟ್ಟುಕೊಳ್ಳಲು ಆಗಿಲ್ಲ ಎನ್ನುತ್ತಾರೆ .

7. ನಮಗೆ ಮಂಜೂರಿಯಾದ ದಾವಾ ಜಮೀನಿನ ಬಗ್ಗೆ ಪ್ರಶ್ನೆ ಮಾಡಿ ಪ್ರತಿವಾದಿಯರು ನಾವು ಈ ದಾವೆಯನ್ನು ಸಲ್ಲಿಸುವುದಕ್ಕಿಂತ ಮೊದಲು ಮೇಲ್ಮನವಿಯನ್ನು ಸಲ್ಲಿಸಿದ್ದರು ಎಂದರೆ ಸಾಕ್ಷಿಯು ನನಗೆ ನೋಟಿಸು ಬಂದ ನಂತರ ಗೊತ್ತಾಗಿರುತ್ತದೆ ಎನ್ನುತ್ತಾರೆ . ನಾನು ಈ ದಾವೆಯನ್ನು ಸಲ್ಲಿಸಿದ್ದು ದಿನಾಂಕ 17-12-2014

ಕ್ಕೆ ಮತ್ತು ನನಗೆ ಎ ಸಿ ನ್ಯಾಯಾಲಯದಿಂದ ನೋಟಿಸು ಬರದಿದ್ದು ದಿನಾಂಕ 29-01-2015 ರಂದು ಇರುತ್ತದೆ . ಮೇಲ್ಮನವಿಯಲ್ಲಿ ನಾನು ವಕೀಲರ ಮೂಲಕ ಹಾಜರಾಗಿದ್ದೇನೆ . ಅದರಲ್ಲಿ ಆಕ್ಷೇಪಣೆಯನ್ನು ಸಲ್ಲಿಸಿದ್ದೇನೆ . ಸದ್ರಿ ಮೇಲ್ಮನವಿಯಲ್ಲಿ ಎ ಸಿ ಯವರು ಮಧ್ಯಂತರ ಆದೇಶವನ್ನು ಮಾಡಿದ್ದಾರೆ ಎಂದರೆ ಸರಿ . ಏನು ಆದೇಶ ಮಾಡಿದ್ದಾರೆ ಎಂದರೆ ಸುಳ್ಳು ಮಾಹಿತಿಯನ್ನು ನೀಡಿ ದರ್ಖಾಸ್ತು ಮಾಡಿಕೊಂಡಿದ್ದರೆ ರದ್ದು ಮಾಡಬಹುದು ಎನ್ನುತ್ತಾರೆ . ಮಧ್ಯಂತರ ಆದೇಶದ ಮೇಲೆ ಜಿಲ್ಲಾಧಿಕಾರಿಯವರ ಮುಂದೆ ಮೇಲ್ಮನವಿಯನ್ನು ಸಲ್ಲಿಸಿದ್ದೇನೆ . ಆ ಪ್ರಕರಣದಲ್ಲಿ ಅಂತಿಮ ತೀರ್ಪನ್ನು ಮಾಡಿದ್ದಾರೆ . ಅದರ ಬಗ್ಗೆ ನನಗೆ ಈಗ ನೆನಪಿಲ್ಲ . ಈಗ ಸಾಕ್ಷಿಗೆ ದಕ್ಷಿಣ ಕನ್ನಡ ಜಿಲ್ಲಾಧಿಕಾರಿಯವರು ಮಾಡಿದ ಆದೇಶವನ್ನು ತೋರಿಸಲಾಗಿ ಅದನ್ನು ಸಾಕ್ಷಿ ನೋಡಿ ಒಪ್ಪಿಕೊಂಡಿದ್ದರಿಂದ ಅದನ್ನು ನಿಡಿ - 1 ಎಂದು ಗುರುತಿಸಲಾಯಿತು . ನಿಡಿ - 1 ಆದೇಶದ ವಿರುದ್ಧ ನಾನು ಮೇಲ್ಮನವಿಯನ್ನು ಸಲ್ಲಿಸಿಲ್ಲ .

ಪ್ರತಿವಾದಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು

(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)
ಓ ಹೇ ಕೇ ಸರಿ ಇದೆ.

ಪ್ರಧಾನ ಸಿವಿಲ್‌ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ ಬಂಟ್ವಾಳ,